ಕೈಯಲ್ಲಿ ಕುಡುಗೋಲು ಹಿಡಿದುಕೊಂಡು ಅಡ್ಡಾಡುತ್ತ ಸುಖಾಸುಮ್ಮನೆ ಹೆದರಿಸುತ್ತಾರೆ. ರಾತ್ರಿಯ ಹೊತ್ತು ಗಿಡಗಳನ್ನು ಏರಿ ಕುಳಿತು ಅಲ್ಲಿಂದ ಕೈ ಮಾಡಿ, ಕಲ್ಲು ಒಗೆದು, ಜೋತು ಬಿದ್ದು ಹೀಹೀಹೀ ಅನ್ನುತ್ತಾರೆ. ಗೂಬೆಯಂತೆ ಒದರುತ್ತಾರೆ. ನರಿಯಂತೆ ಊಳಿಡುತ್ತಾರೆ. ಯಲ್ಲವ್ವ ಒಂದೆರೆಡು ದಿನ ಹೊಲದಲ್ಲಿ ವಸ್ತಿ ಇದ್ದು ಸಿದ್ದೂನಿಗೆ ಮನುಷ್ಯರ ಧ್ವನಿಗಾಗಲಿ, ಪ್ರಾಣಿಗಳ ಒದರುವಿಕೆಗಾಗಲಿ, ದೆವ್ವಗಳ ಚೀರುವಿಕೆಗಾಗಲಿ, ಮರ ಬೀಳುವುದಕ್ಕಾಗಲಿ, ಭೂಮಿ ಕುಸಿಯುವುದಕ್ಕಾಗಲಿ ಹೆದರಬಾರದೆಂದು ಧೈರ್ಯ ತುಂಬಿ ಸಿದ್ದುನನ್ನು ಬಲಶಾಲಿ ಮಾಡಿದಳು. ಹರೆಯದ ಹುಡುಗ ಗಟ್ಟಿ ಎದೆಯವನೆಂದು ತಿಳಿದ ಮೇಲೆ ದೆವ್ವಿನ ಧ್ವನಿಗಳು ಕಡಿಮೆಯಾಗಿ ಅವು ತಂತಮ್ಮ ನೆಲೆ ಸೇರಿಕೊಂಡವು.

'ತಮ್ಮನ ಜೀಂವಕ್ಕ ಏನಾದ್ರೂ ಆದಗೀದೀತ ಅನ್ನೊ ಖಬರ ಐತೇನ ನಿನಗ? ರಾತ್ರಿ ಕಣದಾಗ ಬಂದ ಮಲಕೊಳ್ಳಾಕ ಏನ ದಾಡಿ ಆಕೈತಿ? ಇದಷ್ಟು ಹೊಲ ನಿಗರ ಬಡಿವಂತೆ ತಗೋ. ನಿಮ್ಮಪ್ಪ ಸಾಯೋ ಮುಂದ ಏನ ಕಷ್ಟ ಬಂದ್ರೂ ಮಾರಬ್ಯಾಡ್ರೀ ಅಂತ ಹೇಳಿ ಹ್ವಾದ, ಆಂವ ಒಬ್ಬನಃ ಇದ್ರೂ ಸಂತಿ ಪ್ಯಾಟಿ ಮಾಡಿದ, ಹೊಲ ಹಿಡಿದ, ಮನಿ ಕಟ್ಟಿದ. ಆದರೆ ನೀವು ಮೂರು ಗಂಡು ಮಕ್ಕಳು ಇದ್ರೂ ಕೂಡ ಇದ್ದ ಮೂರು ಎಕರೆ ಹೊಲವನ್ನ ಇವತ್ತು ಮಾರೋಣವೋ, ಇಲ್ಲಾ ನಾಳೆ ಮಾರೋಣವೋ ಅಂತ ಹೊಂಚ ಹಾಕಾಕ ಹತ್ತಿರಲ್ಲೊ? ಖಬರಗೇಡಿಗಳಿಗೆ ಸ್ವಲ್ಪವೂ ಬುದ್ಧಿಯಿಲ್ಲ. ನೀವು ನನ್ನ ಮಕ್ಕಳೊ ಇಲ್ಲಾ ನನ್ನ ಹೊಟ್ಯಾಗ ಹುಟ್ಟಿ ನನ್ನನ್ನೆ ನುಂಗುವಂಥ ಪಿಶಾಚಿಗಳೋ?'

ಅವ್ವ ಎಷ್ಟು ಬೈಯ್ದರೂ ಶಿವಾನಂದ ಮಾತ್ರ ಒಂದು ತುಟಿಯನ್ನು ಎರಡು ಮಾಡುತ್ತಿರಲಿಲ್ಲ. ಮತ್ತೆ ತಮ್ಮನನ್ನು ಕಣದಲ್ಲಿ ಬಿಟ್ಟು ಹೊಟೇಲ ಕಡೆ ನಡೆಯುತ್ತಿದ್ದ. ಅದು ಅವನನ್ನು ಅಷ್ಟು ಜಗ್ಗುತ್ತಿತ್ತು. ಶಿವಣ್ಣ ಆ ಹೊಟೇಲಿನಲ್ಲಿ ಎಷ್ಟೊತ್ತಿಗೆ ಏನು ತಿನ್ನುತ್ತಾನೆ, ಎಷ್ಟು ಮಾತಾಡುತ್ತಾನೆ, ಯಾರ ಕೂಡ ನಕ್ಕು ನಲಿಯುತ್ತಾನೆ ಎನ್ನುವ ವಿಷಯಗಳು ಸಿದ್ದೂನ ಕಿವಿಗೆ ಸಾವಕಾಶ ಬಂದು ಬೀಳತೊಡಗಿದವು. ಅವ್ವ ಮತ್ತಿತರರು ಹೇಳುವ ಮಾತಿನ ಸಂಕೇತ, ಮೈ ಕೈ ಮತ್ತು ಕಣ್ಣಿನ ಸಂಜ್ಞೆಗಳು ಸಿದ್ದೂನಿಗೆ ತಡವಾಗಿಯಾದರೂ ತಿಳಿಯತೊಡಗಿದವು. ನಿಮ್ಮಣ್ಣ ಎಲ್ಲಿ ಅದಾನು ಎಂದು ಸಿದ್ದುನನ್ನು ಕೇಳಿ ಮಂದಿ ನಗಾಡುವರು.

'ರಾತ್ರಿ ನೀ ಮಲಕ್ಕೊಂಡಾಗ ನಾಕ ಚೀಲ ಗೊಂಜಾಳ ತುಂಬಕೊಂಡ ಹೋಗಿ ಚಾದಂಗಡಿ ದೇವಪ್ಪಗ ಕೊಟ್ಟಾನಂತ ನೋಡು! ನಿಮ್ಮಣ್ಣ ಮತ್ತು ಮಾಯಕ್ಕ ಇಲ್ಲೆ ಕಣದಾಗ ಮಕ್ಕೊಂಡಿದ್ರಂತ! ನೀ ಏನ ಎದ್ದು ನೋಡ್ಲಿಲ್ಲೇನು? ಅವರ ಮುಲುಗಾಟಕ್ಕ ಎಚ್ಚರ ಆಗ್ಲಿಲ್ಲೇನು?' ಇಂತಹ ಮಾತು ಕೇಳಿ ಅಣ್ಣನ ಬಗ್ಗೆ ತುಸು ಸಿಟ್ಟು ಬರುವುದು ಸಹಜವಾಗಿತ್ತು. ಅದರ ಜೊತೆಗೆ ಕುತೂಹಲವೂ ಇರುತ್ತಿತ್ತು. ಅವರು ಹೇಳಿದಂತೆ ಅಣ್ಣ ಮತ್ತು ಮಾಯಕ್ಕ ತಮ್ಮ ಹೊಲದಲ್ಲಿ ಮಲಗುತ್ತಾರೆಯೆ? ಇಲ್ಲವಲ್ಲ, ಅಂತಹದನ್ನು ತಾನು ನೋಡಿಲ್ಲವಲ್ಲ. ಗಂಡು ಹೆಣ್ಣು ಕೂಡಿಕೊಂಡಿರುವುದನ್ನು ನೋಡಬೇಕೆಂಬ ತನ್ನ ಗುಪ್ತ ಆಸೆ ಎಲ್ಲರಿಗೂ ಗೊತ್ತಾಗಿಬಿಡುವುದೊ, ಏನೋ? ಅವ್ವನ ಜೊತೆ ಕೆಲಸ ಮಾಡುತ್ತಿರುವ ಅನೇಕ ಹೆಂಗಸರು ಹೊಲದಲ್ಲಿ ಕಳೆ, ಕಸ ತೆಗೆಯುತ್ತ ಬರೀ ಇಂತಹ ಮಾತುಗಳನ್ನೆ ಆಡುತ್ತಿರುತ್ತಾರೆ. ದುಂಡಪ್ಪಕಾಕಾ ತಮ್ಮ ಹೊಲಕ್ಕೆ ಕೆಲಸಕ್ಕೆ ಬರುವ ಮಾಬವ್ವಳೊಂದಿಗೆ ಸಂಬಂಧ ಹೊಂದಿದ್ದಾನೆಂದು ಆಕೆ ಬಂದಿರದಿದ್ದಾಗ ಇವರು ಹೇಳಿಯೇ ಹೇಳುವುದು. ಆಕೆ ಇದ್ದಾಗ ಮಾತ್ರ ಏನೂ ಹೇಳುವುದಿಲ್ಲ. ಆಮೇಲೆ ಮಾಯಕ್ಕ ಅಷ್ಟು ಚೆಲ್ಲುಚೆಲ್ಲಾಗಿ ಅಣ್ಣನ ಜೊತೆ ವರ್ತಿಸುವುದನ್ನು ತಾನು ನೋಡಿಯೆ ಇಲ್ಲ. ಅವಳು ಎಷ್ಟು ಗೌರವಯುತವಾಗಿ ನಡೆದುಕೊಳ್ಳುತ್ತಿರುತ್ತಾಳೆ. ಅಣ್ಣನ ಅವಳ ಹಿಂದೆ ಹೋದಂತೆ ಅನಿಸುವುದು.

ಅವಳನ್ನು ಸಂತುಷ್ಟಗೊಳಿಸುವ ಸಲುವಾಗಿ ಅದೂಇದೂ ಮಾತಾಡುತ್ತ ಇರುವನು. ಮೆಕ್ಕೆಜೋಳದ ತೆನೆಗಳನ್ನು ಬೆಂಕಿಯಲ್ಲಿ ಸುಟ್ಟು ಕೊಡುವನು. ಒಮ್ಮೊಮ್ಮೆ ಕಾಳುಗಳನ್ನು ಸುಲಿದು ಕೊಡುವನು. ಆಕೆ ನಗುತ್ತ ಕೊಡುವ ಉತ್ತರ ಮಜವಾಗಿರುತ್ತಿತ್ತು: 'ಇಂತಹವನ್ನೆಲ್ಲ ತಿನ್ನೋವಯಸ್ಸು ನಂದು ಮುಗೀತು. ನೀನೆ ತಿನ್ನು. ಇಲ್ಲಾ ಸಿದ್ದಣ್ಣ ಕೊಡು. ಅಂವ ತಿಂದು ದಕ್ಕಿಸಕೋತಾನು. ನಾನು ಗೊಂಜಾಳ ತೆನೆಯನ್ನ ಬಾಳ ತಿಂದರೆ ನಾಕೈದು ಸಲ ಬಯಲ ಕಡೆ ಹೋಗಬೇಕಾಗ್ತದ. ಗೊತ್ತೇನು?' ಮಾಯಕ್ಕನ ವರ್ತನೆಯಲ್ಲಿ ತನಗೆ ಏನೂ ಅಸಹಜವಾದದ್ದು ಅನಿಸುತ್ತಿರಲಿಲ್ಲ. ಆದರೂ ಊರಿನ ಮಂದಿ ಶಿವಾನಂದ ಮತ್ತು ಮಾಯಕ್ಕನ ನಡುವೆ ಒಂದು ದೊಡ್ಡ ಸಂಬಂಧವನ್ನು ಸೃಷ್ಟಿ ಮಾಡಿದ್ದಾರೆ!



ಒಂದೊಂದು ಸಲ ಅವ್ವ ಅಣ್ಣನ ಬಗ್ಗೆ ತೀರ ಕೋಪಗೊಂಡಾಗ ಸಿದ್ದಣ್ಣ 'ತಡೀ ಅವ್ವ, ಶಿವಣ್ಣ ಎಲ್ಲಿ ಅದಾನಂತ ಹುಡುಕ್ಕೊಂಡು ಬರ್ತೇನಿ. ಅಂವ ಹೊಟೇಲದಾಗ ಇದ್ದಂದ್ರ ಎಲ್ಲಾರ ಎದುರಿಗೆ ಅಂವಗ ಬೈಯ್ದು ಬರ್ತೇನಿ. ಆವಾಗ ಅಂವಗ ಗೊತ್ತಾಗ್ತೆತಿ. ಜೀವನ ಅಂದ್ರ ಏನು ಅಂತ. ಅಂವಗ ಮನಿ, ಸಂಬಂಧ, ಅವ್ವ, ಅಪ್ಪ, ಅಣ್ಣತಮ್ಮರು, ಅಕ್ಕತಂಗೇರು ಅನ್ನೋದರ ಅರಿವೇ ಇಲ್ಲ.'

'ಅಷ್ಟು ಮಾಡೋ ಸಿದ್ದಣ್ಣ, ಅಂವಗ ನೀನು ತಿರುಗಿ ನಿಂದರಲಿಲ್ಲಂದ್ರ ಅಂವೇನು ಬಗ್ಗಾಂವ ಅಲ್ಲ. ಈ ದುಂಡಪ್ಪಕಾಕಾಗೂ ಹೇಳಿ ಹೇಳಿ ಸಾಕಾತು.' ಸಿದ್ದಣ್ಣ ದುಡುದುಡು ಹೆಜ್ಜೆಯಿಟ್ಟು ಹೊಟೇಲಿನ ಕಡೆ ಧಾವಿಸುವನು. ಇವನು ಹೆಜ್ಜೆ ಇಡುತ್ತಿದ್ದಂತೆಯೆ ದೇವಪ್ಪ ಇವನನ್ನು ಸ್ವಾಗತಿಸುವನು.

'ಶಿವಣ್ಣ ಎಲ್ಲಿ ಅದಾನು? ಅವ್ವಾ ಕರಕೊಂಡು ಬಾ ಅಂತ ಹೇಳ್ಯಾಳು.'

'ಒಂದು ತಾಸಿನ ಹಿಂದೆ ಇದ್ದ. ಈಗ ಇಲ್ಲ.'

'ಎಲ್ಲಿ ಹ್ವಾದ?'

'ನಮಗೇನು ಗೊತ್ತೊ? ಅಂವೇನು ಸಣ್ಣ ಹುಡುಗನೇನು? ಎಲ್ಲಿ ಹೊಕ್ಕೇನಿ ಅಂತ ಹೇಳಿ ಹೋಗಾಕ. ಅಲ್ಲದೆ ನಮಗ್ಯಾಕ ಹೇಳಿ ಹೋಗ್ತಾನು ಅಂವನು. ಅಂವಗ ಮತ್ತು ನಮಗ ಸಂಬಂಧರ ಏನೈತಿ?'

'ಇಪ್ಪತ್ತಾಲ್ಕೂ ತಾಸು ಇಲ್ಲೇ ಇರ್ತಾನು. ನಿಮ್ಮ ಅಂಗಡಿಯೊಳಗ ದುಡಿತಿರತಾನು.'

'ದುಡಿತಿರತಾನು ಖರೆ. ಆದರ ಅಂವನ ಮನಸ್ಸಿಗೆ ಬಂದಾಗ ದುಡಿತಾನು. ಒಮ್ಮೊಮ್ಮೆ ಹೇಳದೆ ಕೇಳದೆ ಎಲ್ಲ್ಯಾದ್ರೂ ಹೋಗಿಬಿಡತಾನು. ಇತ್ತೀಚೆಗೆ ಅಂವ ದುಂಡಪ್ಪನ ಹೊಲದಾಗ ದುಡಿಲಿಕ್ಕೆ ಹೋಗಾಕಹತ್ಯಾನ. ನಿನಗೂ ಗೊತ್ತಿರಬೇಕಲ್ಲ ಅದು.'

ಅಣ್ಣನಿಗೆ ಒಂದಷ್ಟು ಬೈಯ್ದಂಗ ಮಾಡಿ ರಾಶಿ ತುಂಬುವ ನೆಪದಲ್ಲಿ ಅವನನ್ನು ಹೊಲಕ್ಕೆ ಕರೆದುಕೊಂಡು ಹೋಗಲು ಬಂದಿದ್ದ ಸಿದ್ದು ಈಗ ಏನು ಮಾಡುವುದೆಂದು ತಿಳಿಯದೆ ಸ್ವಲ್ಪ ಗೊಂದಲಕ್ಕೊಳಗಾದನು. ಮುಂದೆ ಏನು ಮಾತಾಡುವುದೆಂದು ತಿಳಿಯದೆ ಸುಮ್ಮನೆ ನಿಂತ. ಹೊಟೇಲ್ ಒಳಗೆ ಹಿಂಜರಿದ.

'ಬಾ ಒಳಗ ಬಾ ಸಿದ್ದಣ್ಣ. ನೀನೂ ಅಣ್ಣಗ ದೊಡ್ಡ ಹೆದರಾಂವಪಾ. ಅಲ್ಲೊ ಹೊಟೇಲಗಳು ಯದಕ ಇರ್ತಾವೊ? ಹೊಟ್ಟಿ ಹಸಿದಾಗ ತಿನ್ನಾಕ ಇರ್ತಾವಿಲ್ಲೊ. ನಿಮ್ಮವ್ವ ಮಾಡಿದ ಉಪ್ಪುಖಾರ ಇಲ್ಲದಂಥ, ಎಣ್ಣೆ ಮಕಾ ಕಾಣದಂಥ ಅಡಿಗಿ ನೀ ಹೆಂಗರ ಉಂತೀಯೋ ಮಾರಾಯ? ಬಾಳ ಗಟ್ಟಿ ಹುಡುಗ ಬಿಡಪಾ ನೀನು. ಯಾವಾಗರ ಒಂದ ಸಲ ನಮ್ಮ ರುಚಿ ನೋಡು. ನೀ ಬಿಡೂದ ಇಲ್ಲ. ಇಲ್ಲಾಂದ್ರ ನಿಮ್ಮಣ್ಣ ಹುಚ್ಚ ಅಂತ ತಿಳ್ಕೊಂಡಿಯೇನು. ನಮ್ಮ ಚಾದಂಗಡಿ ಪುರಿ ಬಾಜಿ, ಉಪ್ಪಿಟ್ಟು ಹೊಡದು ಚೆಂದ ಇರಾಕ. ನೀನೂ ನೋಡು ಹೆಂಗ ಅದಿ. ಒಣಗಿ ಹೋಗಿಯಲ್ಲೊ. ಸ್ವಲ್ಪ ಎಣ್ಣಿ, ಖಾರ ತಿಂದು ಮೈ ಹಂಗಃ ರಸರಸ ಅನ್ನಬೇಕು.'

ದೊಡ್ಡ ದೊಡ್ಡ ನಾಲ್ಕು ಪುರಿ, ಬಾಜಿ, ಚಟ್ನಿ ತಂದು ಇಟ್ಟನು. 'ರೊಕ್ಕ ಇಲ್ಲಂತ ಹೆದರಬ್ಯಾಡ ತಗೊ, ನಿಮ್ಮಣ್ಣ ಕೊಡು ಅಂತ ಹೇಳ್ಯಾನ.' ಬಾಯಿಯಲ್ಲಿಯ ಎಲೆಅಡಿಕೆಯ ಚೂರು ಉಗುಳಲಿಕ್ಕೆ ಹೊರಗೆ ಹೋದನು. ಅವನು ಕೂತಿದ್ದ ಕಟ್ಟೆಯೆದುರಿನ ಮುರುಕು ಟೇಬಲ್ ಮೇಲೆ ಪುರಿ– ಬಾಜಿ ಹೊಯ್ದಾಡುತ್ತಿತ್ತು. ಅಂಥದ್ದನ್ನೆಲ್ಲ ತಿನ್ನಬೇಡವೆಂದು ಅವ್ವ ಹೇಳಿದ್ದನ್ನು ನೆನಪಿಸಿಕೊಳ್ಳುತ್ತ ಹೇಗೆ ಬೇಡವೆನ್ನುವುದೆಂದು ಅಥವಾ ಇಲ್ಲಿಂದ ಹೇಗೆ ಎದ್ದು ಹೋಗುವದೆಂದು ಯೋಚಿಸುತ್ತಿದ್ದ. ಅಲ್ಲಿ ಕೂತಿದ್ದ ಕೆಲವು ಮಂದಿ 'ತಿನ್ನೊ ಸಿದ್ದು, ಬ್ಯಾಡ ಯಾಕ ಅಂತೀ' ಎಂದರು. ಮನಸ್ಸು ಹಿಂದೇಟು ಹಾಕುತ್ತಿದ್ದರೂ ಹಬೆಯಾಡುವ ಪುರಿಯನ್ನು ಬಾಯಿಗೆ ಒಯ್ದಿತು. ಆದರೆ ಅವನೊಳಗಿನ ತಪ್ಪಿತಸ್ಥ ಭಾವವೊಂದು ಅವನನ್ನು ಅಣಕಿಸುತ್ತಿರುವಂತೆ ತೋರುತ್ತಿತ್ತು.

"ಏ ಸಿದ್ದು, ನಿನಗೊಂದು ಮಾತು ಹೇಳಲೇನು? ಚಾದಂಗಡಿಗೆ ಒಟ್ಟೇ ಹೋಗಬ್ಯಾಡ. ಆ ಕಡೆ ನಿನ್ನ ತಲಿ ಅಲ್ಲ, ಕಾಲ ಸೈತ ಹಾಕಿ ಮಕ್ಕೋಬ್ಯಾಡ. ದೇವ್ಯಾ ಮತ್ತು ಆ ಮಾಯವ್ವ ಏನೇ ಕೊಟ್ರೂ ತಿನ್ನಬ್ಯಾಡ. ಮಾಟಮಂತ್ರ ಬಾಳಂತ ಅವರದು. ಯಾರನ್ನ ತಮ್ಮ ಹದ್ದಿನೊಳಗ ತಗೊಬೇಕು ಆಗಿರ್ತದ, ಅಂಥವರಿಗೆ ಹಾಕಿ ಕೊಡೋ ಉಪ್ಪಿಟ್ಟು, ಸೂಸಲ ಪ್ಲೇಟಿನೊಳಗ ಯಾವುದೋ ಹಿಟ್ಟು ಕಲಸಿ ಕೊಡ್ತಾಳ ಅನ್ನೋ ಸುದ್ದಿ ಐತಿ. ಹಂಗಂತ ಅದೇನು ವಿಷಾ ಅಲ್ಲ. ತಿನ್ನಲಿಕ್ಕೆ ಬಾಳ ರುಚಿ ಅನಿಸ್ತೈತಿ. ತಿಂದ್ರ ಮಾತ್ರ ಮುಗೀತು ನೋಡು. ಆಕಿ ಮಳ್ಳ ಮಾಡೋದನ್ನ